ನಿಮಗೆ ಇಬ್ಬರಿಗೂ ಕಾಲಾವಕಾಶ ಇದೆ. ಅಷ್ಟೇ ಅಲ್ಲ, ಮೊದಲು ನಿಮ್ಮ ತಂದೆಯ ಕಾಲಾವಕಾಶ ಕೂಡ ಇಲ್ಲೇ ಇತ್ತು. ಅದು ಮುಗಿದ ತಕ್ಷಣ ನೋಡಿ, ಅಲ್ಲಿ ಇದ್ಯಲ್ಲ ಆ ಗಡಿಯಾರ ನಿಂತು ಹೋಯ್ತು. ಅಂದರೆ ನಿಮ್ಮ ತಂದೆಯವರ ಬದುಕಿನ ಕಾಲಾವಕಾಶಕ್ಕೂ ಆ ಗಡಿಯಾರಕ್ಕೂ ಸಂಬಂಧ ಇದೆ ಅಂತ ಅಲ್ವೇ! ಅಷ್ಟೆ ಅಲ್ಲ, ಇಲ್ಲಿ ಇನ್ನೊಂದು ಗಡಿಯಾರ ಇದೆ ನೋಡಿ, ಇದು ಕಾಕತಾಳೀಯವಾಗಿ ನೀವು ಹುಟ್ಟಿದ ಕ್ಷಣದಲ್ಲೇ ಈ ಅಂಗಡಿಗೆ ಬಂತು. ನಿಮ್ಮ ಕಾಲಾವಕಾಶಕ್ಕೂ ಈ ಗಡಿಯಾರಕ್ಕೂ ಸಂಬಂಧವಿರಬಹುದು. ಆದರೆ ನೀವೀಗ ಕಾಲ ಮತ್ತು ಅವಕಾಶಾನ ಬೇರೆ ಮಾಡೋದಿಕ್ಕೆ ಹೊರಟಿದ್ದೀರ! ಅದರಿಂದ ಅನಾಹುತವಾಗಬಹುದು ಅನ್ನೋದು ನನ್ನ ಭಾವನೆ. ಈ ವಿಷಯ ನಿಮಗೆ ತಿಳಿಸಬೇಕು ಅಂತ ನನ್ನ ಮನಸ್ಸಿನಲ್ಲಿ ಇತ್ತು! ಅದಕ್ಕೇ ನೀವೇ ಬರಬೇಕು ಅಂತ ಹೇಳಿದ್ದು' ಎಂದ.

ಆದಿಮೂರ್ತಿ ತರ್ಕ ಕೇಳಿ ರಮೇಶ ತಬ್ಬಿಬ್ಬಾದ. ಆದರೆ ಅಂಗಡಿಯ ಗಡಿಯಾರಕ್ಕೂ ತನ್ನ ಆಯಸ್ಸಿಗೂ ಸಂಬಂಧವಿದೆ ಎಂದು ಅವನು ನಂಬಲಿಲ್ಲ. ಅವನ ತರ್ಕಕ್ಕೆ ತಾನೂ ಮತ್ತೊಂದು ಬಗೆಯ ತರ್ಕದಿಂದಲೇ ಉತ್ತರ ನೀಡಬೇಕೆಂದು ಯೋಚಿಸಿ 'ನೀವು ಹೇಳ್ತಾ ಇರೋ ವಿಷಯ ಸ್ವಲ್ಪ ವಿಶೇಷವಾಗಿದೆ. ಈಗ ನಿಧಾನಕ್ಕೆ ಮಾತಾಡೋ ಅಷ್ಟು ಸಮಯ ಇಲ್ಲ ನನಗೆ! ಇನ್ನೊಂದು ಸರ್ತಿ ಬರ್ತೀನಿ' ಎಂದು ಹೇಳಿ ಹೊರಟ.

ಗಡಿಯಾರದಂಗಡಿ ಬಿಟ್ಟು ಹೋದಾಗಿನಿಂದ ರಮೇಶ ಯೋಚಿಸುತ್ತಲೇ ಇದ್ದ. ಅವನಿಗೆ ಆದಿಮೂರ್ತಿಯ ಮಾತುಗಳು ನಿಜವಿರಬಹುದೇ ಎನ್ನುವ ಅನುಮಾನ ಮನಸ್ಸಿನಲ್ಲಿ ಒಂದು ಕಡೆ ಕೊರೆಯುತ್ತಿದ್ದರೆ, ಅವನ ವಾದಕ್ಕೆ ತಕ್ಕ ಪ್ರತ್ಯುತ್ತರ ನೀಡಿ ತನ್ನ ಕಾರ್ಯ ಸಾಧಿಸಬೇಕು ಎನ್ನುವ ಹಟ ಮನಸ್ಸಿನ ಇನ್ನೊಂದು ಭಾಗದಲ್ಲಿತ್ತು. ಆದರೆ ಅದಕ್ಕೆ ಪೂರಕವಾಗಿ ಅವನ ಬುದ್ಧಿಗೆ ಏನೂ ಹೊಳೆಯಲಿಲ್ಲ. ಆಗ ಅವನಿಗೆ ನೆನಪಾಗಿದ್ದು ಒಗಟೊಗಟಾಗಿ ಮಾತನಾಡುವ, ಕತೆ ಕಟ್ಟುವ ಗೆಳೆಯ 'ಅನೂಹ್ಯ'! ಆ ಹೆಸರು ಕೂಡ ಅವನು ತನಗೆ ತಾನೇ ಇಟ್ಟುಕೊಂಡಿದ್ದು. ಅವನು ಯಾವಾಗಲೂ ಒಂಟಿಯಾಗಿರುತ್ತಿದ್ದ ಮತ್ತು ಅದನ್ನೇ ಇಷ್ಟಪಡುತ್ತಿದ್ದ. ಯಾರಾದರೂ ಅನೂಹ್ಯನನ್ನು ಭೇಟಿ ಮಾಡಬೇಕೆಂದರೆ ಮೊದಲೇ ತಿಳಿಸಿ ಅವನ ಒಪ್ಪಿಗೆ ಪಡೆಯಬೇಕಿತ್ತು. ಅದನ್ನು ಅರಿತಿದ್ದ ರಮೇಶ ಅವನಿಗೆ ಕರೆ ಮಾಡಿ ಮುಂಚಿತವಾಗಿಯೇ ಒಪ್ಪಿಗೆ ಪಡೆದು ನಂತರ ಅವನ ಕೊಠಡಿಗೆ ಹೋದ. ತನ್ನ ಬಾಡಿಗೆ ಕೊಠಡಿಯಲ್ಲಿ ಅನೂಹ್ಯ ಮೇಜಿನ ಮುಂದೆ ಕುಳಿತು ಕಿಟಕಿಯ ಹೊರಗಿನ ದೃಶ್ಯವನ್ನು ವೀಕ್ಷಿಸುತ್ತಿದ್ದ. ರಮೇಶ ಕೊಠಡಿಯನ್ನು ಪ್ರವೇಶಿಸಿ ಅಲ್ಲಿದ್ದ ಮತ್ತೊಂದು ಕುರ್ಚಿಯ ಮೇಲೆ ಕುಳಿತ! ನಂತರ ತನ್ನ ಸಮಸ್ಯೆಯನ್ನು ಚುಟುಕಾಗಿ ಹೇಳಿ ಮುಗಿಸಿ ಅನೂಹ್ಯನ ಉತ್ತರಕ್ಕೆ ಕಾದ.

ಅನೂಹ್ಯ, 'ಬಲಪ್ರಯೋಗ ಮಾಡಿ ಬಿಡಿಸಬಹುದಲ್ಲ. ಹಾಗೇಕೆ ಮಾಡುತ್ತಿಲ್ಲ' ಎಂದು ಪ್ರಶ್ನಿಸಿದ. ರಮೇಶ ಆದಿಮೂರ್ತಿಯ ತರ್ಕಗಳನ್ನು ವಿವರಿಸಿದ! ಅಲ್ಲದೆ ಅವನಂಥ ಹಳೆಯ ಬಾಡಿಗೆದಾರರನ್ನು ಹಿಂಸೆ ಮಾಡಿ ಬಿಡಿಸಲು ತನ್ನ ಮನಸ್ಸು ಒಪ್ಪುತ್ತಿಲ್ಲವೆಂದ. ಆದಿಮೂರ್ತಿಯ ತರ್ಕ ಕೇಳಿ ಖುಷಿಪಟ್ಟ ಅನೂಹ್ಯ 'ಹೀಗೋ ಸಮಾಚಾರ! ನಾನು ಅವನಿಗೆ ಕಾಲದ ಬಗ್ಗೆ ವಾಸ್ತವ ತಿಳುಸ್ತೀನಿ. ಕಾಲದ ಬಗ್ಗೆ, ಗಡಿಯಾರದ ಬಗ್ಗೆ ಅವನ ಪರಿಕಲ್ಪನೆ, ಸಿದ್ಧಾಂತ ಏನೇನು ಇದ್ಯೋ ಅದೆಲ್ಲಾ ತಪ್ಪು ಅಂತ ತೋರುಸ್ತೀನಿ, ಆದರೆ ಅದಕ್ಕೆ ನನಗೆ ಸ್ವಲ್ಪ ಸಮಯ ಬೇಕು. ನಾನು ಯಾವತ್ತು ಬರ್ತೀನಿ ಅಂತ ನಾನೇ ಹೇಳ್ತೀನಿ' ಎಂದ.

ತಾನು ನಿಗದಿಪಡಿಸಿದ ದಿನ ಅನೂಹ್ಯ, ರಮೇಶನ ಜೊತೆಗೆ ಗಡಿಯಾರದಂಗಡಿ ಪ್ರವೇಶಿಸಿದ. ಕಣ್ಣಿಗೆ ಲೆನ್ಸ್ ಸಿಕ್ಕಿಸಿಕೊಂಡು ಕೈಗಡಿಯಾರವನ್ನು ರಿಪೇರಿ ಮಾಡುತ್ತಿದ್ದ ಆದಿಮೂರ್ತಿ ತಲೆಯೆತ್ತಿ ನೋಡಿದ. ಆಗ ಅನೂಹ್ಯ 'ಕಾಲವೇ ಇಲ್ಲ, ಗಡಿಯಾರವೇ ಎಲ್ಲಾ' ಎಂದು ಉದ್ಗರಿಸಿದ. 'ಇವನ್ಯಾರೋ ಹೊಸಬ ಬಂದು ಏನೋ ಒದರುತ್ತಿದ್ದಾನೆ ಎನ್ನಿಸಿದರೂ, ಅವನು ಮಾಲೀಕನ ಜೊತೆ ಬಂದಿರುವುದನ್ನು